

## ಸಲ್ಲು ಹೊಸ ಪ್ರೇಮ ಪುರಾಣ!

**ಬಾ**ಲಿವುಡ್‌ನ ಚಿರ ಬ್ರಹ್ಮಚಾರಿ ಎಂದೇ 'ಖ್ಯಾತಿ' ಗಳಿಸಿರುವ ಬ್ಯಾಡ್‌ಬಾಯ್ ಸಲ್ಮಾನ್ ಖಾನ್‌ಗೆ ಹೊಸ ಗೆಳತಿ ಸಿಕ್ಕಿದ್ದಾಳಂತೆ. ಹೀಗೊಂದು ಗಾಸಿಪ್ ಬಾಲಿವುಡ್ ಅಂಗಳದಲ್ಲಿ ಹರಿದಾಡುತ್ತಿದೆ. ಸಲ್ಲು ಹೆಸರು ತಳುಕು ಹಾಕಿಕೊಂಡಿರುವುದು ರೊಮಾನಿಯಾದ ಟಿವಿ ನಿರೂಪಿಕಿ ಇಯುಲಿಯಾ ವಂಚುರ್ ಜೊತೆ, ಹೊರದೇಶವೊಂದರಲ್ಲಿ ಎರಡು ವರ್ಷಗಳ ಹಿಂದೆ ಭೇಟಿಯಾಗಿದ್ದ ಸಲ್ಲು ಮತ್ತು ಇಯುಲಿಯಾ ನಡುವಿನ ಗೆಳೆತನ ಪ್ರೇಮಕ್ಕೆ ತಿರುಗಿದ್ದಲ್ಲದೆ ಇಬ್ಬರೂ ಮದುವೆಯಾಗಲು ತೀರ್ಮಾನಿಸಿದ್ದಾರಂತೆ.

ಸಲ್ಲು ಪ್ರೇಮ ಪುರಾಣಗಳು ಹೊಸತಲ್ಲವಾದರೂ, ತಮ್ಮ ಹೊಸ ಗೆಳತಿ ವಿಚಾರದಲ್ಲಿ ಸಲ್ಲು ತುಂಬಾ ಗಂಭೀರವಾಗಿ ಚಿಂತಿಸಿದ್ದಾರಂತೆ. ಎರಡು ವರ್ಷದಿಂದ ಈ ವಿಷಯವನ್ನು ಮುಚ್ಚಿಟ್ಟಿದ್ದ ಅವರು, ಆಪ್ತರ ಬಳಿ ತಮ್ಮಿಬ್ಬರ ಸಂಬಂಧದ ಗುಟ್ಟನ್ನು ಬಿಚ್ಚಿಟ್ಟಿದ್ದಾರಂತೆ. ಇನ್ನಾದರೂ ಮದುವೆಯಾಗು ಎಂಬ ಹಿತೈಷಿಗಳ ಸಲಹೆಗೆ ಕಿವಿಗೊಟ್ಟಿರುವ ಸಲ್ಮಾನ್, ಶೀಘ್ರವೇ ಮದುಮಗನಾಗಲು ತಯಾರಿ ನಡೆಸಿದ್ದಾರಂತೆ. ಯಾವ ಹೀರೋ ಕೈಕೊಟ್ಟರೂ ಸಲ್ಮಾನ್ ಬ್ರಹ್ಮಚರ್ಯ ತಮ್ಮ ಕನಸುಗಳನ್ನು ಭಗ್ನ ಮಾಡುವುದಿಲ್ಲ ಎಂದು ನಂಬಿರುವ ಸಲ್ಲುವಿನ ಮಹಿಳಾ ಅಭಿಮಾನಿಗಳಿಗೆ ಈ ಸುದ್ದಿ ಕೇಳಿ ಹೃದಯ ಚೂರಾದ ಅನುಭವಾಗಬಹುದು!



## ರಾಜಕೀಯ ಪ್ರೀತಿ!

ಸಿನಿಮಾದಲ್ಲಿ ಏರಿಳಿತದ ಹಾದಿ, ಉದ್ದಿಮೆಯಲ್ಲಿ ಒಂದಷ್ಟು ಲಾಭ, ಕ್ರಿಕೆಟ್‌ನಲ್ಲಿ ಸೋತದ್ದೇ ಹೆಚ್ಚು.– ಇದು ನಟಿ ಪ್ರೀತಿ ಜಿಂಟಾ ಸಾಹಸಯಾನ. ಈಗ ಆಕೆಯ ಕಣ್ಣು ರಾಜಕೀಯದ ಮೇಲೆ ಬಿದ್ದಿದೆ. ರಾಜಕೀಯಕ್ಕೆ ಧುಮುಕುವತ್ತ ಪ್ರೀತಿ ಗಂಭೀರವಾಗಿ ಚಿಂತಿಸುತ್ತಿದ್ದಾರಂತೆ.

'ದೇಶದಲ್ಲಿ ನಡೆಯುತ್ತಿರುವ ಅಹಿತಕರ ಸಂಗತಿಗಳು ನೋವನ್ನುಂಟು ಮಾಡುತ್ತಿದೆ. ಹೀಗಾಗಿ ದೇಶವನ್ನು ಸಕಾರಾತ್ಮಕ ದೆಸೆಯಲ್ಲಿ ಬದಲಿಸುವ ಕಾರ್ಯದಲ್ಲಿ ಪಾಲ್ಗೊಳ್ಳುವುದು ನನ್ನ ಬಯಕೆ. ಹೀಗಾಗಿ ಮುಂದೊಂದು ದಿನ ನಾನು ಹೊರಬಂದು ನನಗೆ ಮತ ನೀಡಿ ಎಂದು ಕೇಳುತ್ತೇನೆ' ಎಂದಿದ್ದಾರೆ ಪ್ರೀತಿ. ರಾಜಕೀಯಕ್ಕೆ ಬಂದ ನಂತರವೂ ಪ್ರೀತಿ ಸಿನಿಮೀಯ ವರಸೆ ಬದಲಾಗುವ ಲಕ್ಷಣವಿಲ್ಲ. ಸುಂದರ ಕೂದಲಿನ ಆಕರ್ಷಕ ಉಡುಪು ಧರಿಸುವ ಪ್ರೀತಿ ಅತ್ಯಂತ ಗ್ಲಾಮರಸ್ ರಾಜಕಾರಣಿಯಾಗಲಿದ್ದಾರಂತೆ. ಆದರೆ ಎಂದಿಗೂ ಭ್ರಷ್ಟಳಾಗ ಲಾರೆ ಎಂಬ ವಚನವನ್ನೂ ನೀಡಿದ್ದಾರೆ. 'ತಿನ್ನಲು ಬಿಸ್ಕತ್ ತಿನ್ನುತ್ತೇವೆಯೇ ಹೊರತು, ಚಿನ್ನದ ಬಿಸ್ಕತ್ತನ್ನು ತಿನ್ನಲಾಗುವುದಿಲ್ಲವಲ್ಲ!' ಎನ್ನುವ ಪ್ರೀತಿ ನಡೆ ರಾಜಕೀಯಕ್ಕಿಳಿದ ನಂತರ ಹೇಗೆ ಇರುತ್ತದೋ ಕಾದು ನೋಡಬೇಕು.





## ಮುನ್ನಾಭಾಯಿ ಇಲ್ಲದ ಮೇಲೆ...

**'ಮು**ನ್ನಾಭಾಯಿ' ಸಂಜಯ್ ದತ್ ಜೈಲು ಸೇರಿದ ಬಳಿಕ 'ಮುನ್ನಾಭಾಯಿ'ಗಳ ನಿರ್ಮಾಪಕರು ದಿಗಿಲುಗೊಂಡಿರುವುದು ನಿಜ. ಹೀರೋ ಕೈಕೊಟ್ಟಾಗ ನಿರ್ಮಾಪಕರು ಬೇರೆ ಹೀರೋ ಮನೆ ಮುಂದೆ ನಿಲ್ಲುವುದು ಅನಿವಾರ್ಯ. ಆದರೆ 'ಮುನ್ನಾಭಾಯಿ'ಯ ವಿಚಾರದಲ್ಲಿ ನಿರ್ಮಾಪಕರಿಗೆ ಆ ಅದೃಷ್ಟವಿಲ್ಲ. 'ಮುನ್ನಾಭಾಯಿ ಎಂಬಿಬಿಎಸ್' ಮತ್ತು 'ಲಗೇ ರಹೋ ಮುನ್ನಾಭಾಯಿ' ಸಿನಿಮಾಗಳು ಹಿಟ್ ಆದದ್ದೇ ತಡ, ಮುನ್ನಾಭಾಯಿಯ ಮೇಲೆ ಬಾಲಿವುಡ್ ಕಥೆಗಾರರು ಹತ್ತಾರು ಕಥೆಗಳನ್ನು ಸಿದ್ಧಪಡಿಸಿದ್ದಾರೆ. ಅವುಗಳಲ್ಲಿ ಹಲವು ಸಿನಿಮಾ ರೂಪಕ್ಕೆ ಇಳಿಯಲು ಸಿದ್ಧವಾಗಿವೆ. ಆದರೆ ಅತ್ತ ಸಂಜಯ್ ಸೆರೆಮನೆ ಸೇರಿದ್ದಾರೆ. ಸಂಜು ಬಾಯ್ ಇಲ್ಲದೆ 'ಮುನ್ನಾಭಾಯಿ'ಯ ಆವೃತ್ತಿಗಳನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ.

ಮುನ್ನಾಭಾಯಿಯ ಬಲಗೈ 'ಸರ್ಕೀಟ್' ಅರ್ಷದ್ ವಾರ್ಸಿ ಸಹ ಸಂಜು ಭಾಯ್ ಇಲ್ಲದ ಮುನ್ನಾಭಾಯಿ ಚಿತ್ರಗಳಿಗೆ ನೋ ಎಂದಿದ್ದಾರೆ. ಸಂಜಯ್ ದತ್ ಸ್ಥಾನದಲ್ಲಿ ಬೇರಾವ ನಟನನ್ನು ನನಗಾಗಲೀ ಅಥವಾ ಅಭಿಮಾನಿಗಳಿಗಾಗಲೀ ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ ಎಂದಿದ್ದಾರೆ ಅರ್ಷದ್.

■ ಅಮಿ